


# ಕಲಾವಿಮರ್ಶೆ: ಕಾಡುವ ಕೊರತೆ

ಸಾಹಿತ್ಯದ ಜೊತೆಗೆ ಸಾಹಿತ್ಯ ವಿಮರ್ಶೆ ಇರುವಂತೆ ದೃಶ್ಯಕಲೆಗಳ ನೆರಳಿನಂತೆ ಕಲಾವಿಮರ್ಶೆ ಇರುತ್ತದೆ. ಸೃಜನಶೀಲ ಕಲೆಯನ್ನು ಅರಿಯುವ, ಸವಿಯುವ, ಚರ್ಚಿಸುವ ಮತ್ತು ಮೌಲ್ಯಮಾಪನ ಮಾಡುವ ಈ ಪ್ರಕ್ರಿಯೆ, ಹದಿನೆಂಟನೇ ಶತಮಾನದಲ್ಲಿ ಯೂರೋಪ್‌ನಲ್ಲಿ ಒಂದು ಆಧುನಿಕ ಬೌದ್ಧಿಕ ಶಿಸ್ತಾಗಿ ರೂಪುಗೊಂಡಿತು. ದೃಶ್ಯಕಲೆಗಳಲ್ಲಿ ಎಷ್ಟು ವೈವಿಧ್ಯ ಇದೆಯೋ ಎಷ್ಟು ಚಳವಳಿಗಳು ಇವೆಯೋ ಅವೆಲ್ಲವನ್ನೂ ಇದು ಒಳಗೊಳ್ಳುತ್ತದೆ. ಅಲ್ಲದೆ, ಕಲೆಯ ಗ್ರಹಿಕೆಯ ವಿಭಿನ್ನ ನೆಲೆಗಳಿಗೆ ಅನುಗುಣವಾಗಿ ಇದರಲ್ಲೂ ಪಂಥಗಳಿವೆ. ಒಟ್ಟಿನಲ್ಲಿ ಕಲಾವಿಮರ್ಶೆ ಅತ್ಯಂತ ವ್ಯಾಪಕವಾದ ಸಾಂಸ್ಕೃತಿಕ ಚಟುವಟಿಕೆಯಾಗಿದೆ. ಕಲಾವಿಮರ್ಶೆಯನ್ನು ಇದ್ದಕ್ಕಿದ್ದಂತೆ ಯಾರೂ ಮಾಡಲು ಸಾಧ್ಯವಿಲ್ಲ. ಇದು ಅಭಿರುಚಿ, ಸತತ ಅಧ್ಯಯನ ಮತ್ತು ಸೂಕ್ಷ್ಮ ಸಂವೇದನೆಗಳ ಮೂಲಕ ಗಳಿಸಿಕೊಳ್ಳಬೇಕಾದ ಶಕ್ತಿ. ಇದನ್ನು ಕಲಿಯಬೇಕು, ಹಾಗೇ ಕಲಿಸಬೇಕು.

ಕಲಾ ವಿಮರ್ಶಕರನ್ನು ರೂಪಿಸಲು ಸಾಧ್ಯವೇ ಎನ್ನುವ ಪ್ರಶ್ನೆ ಎಷ್ಟೇ ಚರ್ಚಾರ್ಹವಾದರೂ ಅದಕ್ಕೆ ಸಾಧ್ಯ ಎನ್ನುವ ಉತ್ತರವಿದ್ದೇ ಇದೆ. ಎಲ್ಲ ಕಾಲಕ್ಕೂ ಕಲಾವಿದರಿಗೆ ಹೋಲಿಸಿದರೆ ಕಲಾ ವಿಮರ್ಶಕರ ಸಂಖ್ಯೆ ಅತ್ಯಂತ ಕಡಿಮೆ ಇರುವುದು ಸತ್ಯ ಮತ್ತು ಸೂಕ್ತ. ಆದರೆ ಮುಂದಿನ ಪೀಳಿಗೆಯ ಕಲಾವಿಮರ್ಶಕರನ್ನು ತಯಾರು ಮಾಡುವುದು ಕಲಾವಿದರು, ಕಲಾ ಇತಿಹಾಸಕಾರರು ಮತ್ತು ಹಿರಿಯ ಕಲಾ ವಿಮರ್ಶಕರ ಸಾಂಸ್ಕೃತಿಕ ಹೊಣೆಗಾರಿಕೆ. ದೃಶ್ಯಕಲೆಯನ್ನು ಅರ್ಥೈಸಿಕೊಂಡು ವಿಮರ್ಶಿಸುವಂತೆ ಮತ್ತು ಬರೆಯುವಂತೆ ಯುವಜನರನ್ನು ಪ್ರೇರೇಪಿಸುವುದು ಪ್ರತೀ ದಶಕದ ಜರೂರು ಎಂದರೆ ತಪ್ಪಿಲ್ಲ.

ಕಲಾವಿಮರ್ಶೆ ಅನೇಕ ಬಾರಿ ಅನಾಕರ್ಷಕ ಕೆಲಸ ಎನಿಸಬಹುದು, 'ನೀನೇರಬಲ್ಲೆಯಾ ನಾನೇರುವೆತ್ತರಕೆ?' ಎಂಬ ನಿರಂತರ ಸವಾಲನ್ನೂ ಎದುರಿಸಬಹುದು. ಆದರೆ ವಿಮರ್ಶೆಯಿಲ್ಲದೆ ಕಲೆಯ ಕ್ಷೇತ್ರ ಕಳೆಗಟ್ಟುವುದಿಲ್ಲ. ಈಗ ಅಲ್ಲಿ ಕಲಾವಿಮರ್ಶಕರ ಕೊರತೆ ಎಂದಿಗಿಂತಲೂ ಹೆಚ್ಚಾಗಿ ಎದ್ದು ಕಾಣುತ್ತಿದೆ. ದೃಶ್ಯಕಲೆಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಖಾಸಗಿ ಸಂಸ್ಥೆಗಳು, ಅಕಾಡೆಮಿಗಳು, ವಿಶ್ವವಿದ್ಯಾಲಯಗಳ ಕಲಾವಿಭಾಗಗಳು ಈ ದಿಸೆಯಲ್ಲಿ ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ನಡೆಸುವುದು ಅಗತ್ಯ. ದೃಶ್ಯಕಲೆಯ ಅರ್ಥೈಸುವಿಕೆ ಮತ್ತು ವಿಮರ್ಶೆ ಕುರಿತ ಅಂಕಣಗಳನ್ನು ಆಗಾಗ ಪ್ರಕಟಿಸುವ 'ಮಯೂರ'ದ ಪ್ರಯತ್ನದ ಹಿಂದೆ ಅಂಥ ಕಾಳಜಿಯಿದೆ.

**–ಆರ್. ಪೂರ್ಣಿಮಾ**